

# ಮಹಿಳಾ ಉದ್ಯಮಿಗಳಿಗೆ ವಿಫುಲ ಅವಕಾಶ: ಪ್ರೀತಿ ಅದಾನಿ

ಉಡುಪಿ: ಕರ್ನಾಟಕ ರಾಜ್ಯ ಮಹಿಳಾ ಉದ್ಯಮಶೀಲತಾ ಚಟುವಟಿಕೆಗಳಿಗೆ ದೇಶದಲ್ಲಿ ಮೂರನೇ ಸ್ಥಾನದಲ್ಲಿದ್ದು ಸುಮಾರು 1 ಲಕ್ಷಕ್ಕಿಂತ ಹೆಚ್ಚು ಮಹಿಳೆಯರ ಉದ್ಯಮಕ್ಕೆ ನೆಲೆಯಾಗಿರುವುದು ಸಂತಸ ತಂದಿದೆ ಎಂದು ಅದಾನಿ ಪ್ರತಿಷ್ಠಾನ ಅಧ್ಯಕ್ಷೆ ಡಾ. ಪ್ರೀತಿ ಜಿ. ಅದಾನಿ ಹೇಳಿದರು.

ಬೆಂಗಳೂರಿನ ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ 'ಥಿಂಕ್ ಬಿಗ್' ಮಹಿಳಾ ಉದ್ಯಮಿಗಳ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಬೃಹತ್ ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ, ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೆ. ರತ್ನಪ್ರಭಾ ಇದ್ದರು.

2012–13ರಲ್ಲಿ ಮಹಿಳೆಯರ ಉದ್ದಿಮೆ ಒಟ್ಟು 11,404 ದಶಲಕ್ಷದಷ್ಟಿದ್ದು, ಅದು 0.46 ದಶಲಕ್ಷ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ. ಅದು ಮಹಿಳೆಯರ ಆರ್ಥಿಕ ಪರಿಸ್ಥಿತಿ ಮೇಲೆ ಬೀರುವ ಪ್ರಭಾವವನ್ನು ಸೂಚಿಸುತ್ತದೆ. ನಾಲ್ಕನೇ ಮಧ್ಯಮ, ಸಣ್ಣ ಮತ್ತು ಮೈಕ್ರೊ ಎಂಟರ್‌ಪ್ರೈಸಸ್ ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ಶೇ. 51.9 ಮಹಿಳಾ ಉದ್ಯಮಗಳಿದ್ದು ದಕ್ಷಿಣ ಭಾರತ ಅದರಲ್ಲೂ ವಿಶೇಷವಾಗಿ ಕರ್ನಾಟಕ ಅತ್ಯುತ್ತಮ ಸ್ಥಾನ ಹೊಂದಿರುವುದು ಶ್ಲಾಘನೀಯ ಎಂದರು.

ಅದಾನಿ ಪ್ರತಿಷ್ಠಾನ ಭಾರತದ 13 ರಾಜ್ಯಗಳಲ್ಲಿ ಮಹಿಳಾ ಉದ್ದಿಮೆಯೊಂದಿಗೆ ಕೆಲಸ ನಿರ್ವಹಿಸುತ್ತಿದ್ದು, ಮಹಿಳಾ ಸಬಲೀಕರಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಛತ್ತೀಸಗಢ ಮಹಿಳಾ ಉದ್ಯಮವೊಂದಕ್ಕೆ ಶಾಲಾ ಸಮವಸ್ತ್ರ ಹೊಲಿಯುವ ಕೆಲಸದಲ್ಲಿ ಸಣ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಅದಾನಿ ಪ್ರತಿಷ್ಠಾನ ನೆರವಾಗಿದ್ದು, ಈಗ ಆ ಉದ್ಯಮ ರಾಜ್ಯದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಸಮವಸ್ತ್ರ ಸರಬರಾಜು ಮಾಡುವಲ್ಲಿ ಮೇಲುಗೈ ಸಾಧಿಸಿದೆ ಎಂದರು.

ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಿ. ವಿ. ಪ್ರಸಾದ್, ಕೈಗಾರಿಕಾ ಇಲಾಖೆ ಆಯುಕ್ತ ಗೌರವ್ ಗುಪ್ತ, ವೀ ಕನೆಕ್ಟ್ ಮುಖ್ಯಸ್ಥೆ ಎಲಿಜಬೆತ್ ವಾಸ್ಕಯೂಜ್, ಕಾರ್ಯನಿರ್ವಾಹಕ ನಿರ್ದೇಶಕ ಪಾರೂಲ್ ಸೋನಿ, ರಾಷ್ಟ್ರೀಯ ಮಹಿಳಾ ಆಯೋಗ ಅಧ್ಯಕ್ಷೆ ಲಲಿತಾಕುಮಾರ ಮಂಗಲಮ್, ಉದ್ಯಮಿಗಳಾದ ಬಂಟಿ ಬೊಹ್ರಾ, ಉಮಾ ರೆಡ್ಡಿ, ಅದಾನಿ ಯುಪಿಸಿಎಲ್ ಸಂಸ್ಥೆ ಜಂಟಿ ಅಧ್ಯಕ್ಷ ಕಿಶೋರ್ ಆಳ್ವ ಇದ್ದರು.

## Lavish Opportunity for Women Entrepreneurs: Priti Adani

Udupi: Adani Foundation Chairperson Dr. Priti G. Adani has informed that she is happy to note that Karnataka State ranks third in the nation for women entrepreneurial activity and is home for more than 1 lakh Women Business Enterprises.

She spoke after Inaugurating the ‘Think Big’ Women Entrepreneurship Meet at Bangalore International Exhibition Centre.
.
The Summit was inaugurated by Karnataka State Chief Minister Siddaramaiah and Heavy Industries Minister R.V. Deshpande. K. Ratna Prabha, Additional Chief Secretary to Government of Karnataka was present on the occasion.

She appreciated that the total investment of women owned enterprises totalled $ 404 million in 2012-13 and they employed 0.46 million persons thereby signifying the economic impact of women owned enterprises. As per the fourth Medium, Small and Micro Enterprises (MSME) census conducted, the four States Karnataka, Kerala, Tamil Nadu and West Bengal put together have 51.9 per cent of the country’s women-owned business indicating that South India and especially Karnataka has an excellent ecosystem for women entrepreneurs.

She told that Adani Foundation is working in association with Women Entrepreneurs across 13 states in India and is aiming at women empowerment. In Chattisgarh Adani Foundation has supported one women enterprise in a small way for involving themselves in stitching of

school uniforms. Today this enterprise has achieved lead in supplying uniforms to lakhs of students in the entire district.

D.V. Prasad, Additional Chief Secretary of Department of Commerce and Industries, Gaurav Gupta, Commissioner for Industries Development, Lalitha Kumaramangalam, Chairperson of National Commission for Women, Government of India, Bunty Bohra, CEO of Goldman Sachs India, Parul Soni, Executive Director of WEConnect International; Elizabeth Vasques, CEO of WEConnect International, Uma Reddy, Director of WEConnect India Association and Kishore Alva, Joint President of Adani UPCL were present on the occasion.